# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಎಂ ವಿ ಸಿ ನಂಬರ 823/2023

| | | ಪಿಡಬ್ಲ್ಯೂ | 2 |
|---|---|---|---|

ಸಾಕ್ಷಿದಾರರ ಹೆಸರು : ಡಾಃ ಶಿವಕುಮಾರ ಜ್ಯೋತಿ

ತಂದೆಯ ಹೆಸರು : ಚಂದ್ರಶೇಖರಪ್ಪ

ವಯಸ್ಸು : 58 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.12.2025

ಉದ್ಯೋಗ : ಪಶು ವೈದ್ಯಾಧಿಕಾರಿ

ವಾಸ ಸ್ಥಳ : ಹರಪನಹಳ್ಳಿ

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ನಾನು 2021 ರಿಂದ ನಾನು ಹರಪನಹಳ್ಳಿ ಪಶು ವೈದ್ಯಾಧಿಕಾರಿ ಅಂತಾ ಸೇವೆ ಸಲ್ಲಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 11. ಅಪಘಾತ ದಲ್ಲಿ ಆಡು ವತ್ತು ಕುರಿ ಗಾಯಗೊಂಡಿದ್ದು ಅವುಗಳಿಗೆ ಚಿಕಿತ್ಸೆ ನೀಡಿದ್ದು ಪೋಸ್ಟುಮಾರ್ಟಂ ಕೂಡ ಮಾಡಿರುತ್ತೇನೆ. ನಿ ಪಿ 10 ರಿಂದ 28 ನಾನು ನೀಡಿರುವ ಶವಪರೀಕ್ಷಾವರದಿ ಇರುತ್ತದೆ. ನಿ ಪಿ 29 ರಿಂದ 36 ನಾನು ನೀಡಿದ ಗಾಯದ ಪ್ರಮಾಣ ಪತ್ರ ಆಗಿರುತ್ತದೆ. ನಿ ಪಿ 10 ರಿಂದ 28 ರಲ್ಲಿ ತೋರಿಸಿರುವ ಕುರಿಗಳ ವಯಸ್ಸು 4 ರಿಂದ 5 ವರ್ಷ ಅವುಗಳಲ್ಲಿ 8 ಕುರಿಗಳು ಗರ್ಭವಸ್ಥೆಯಲ್ಲಿ ಇದ್ದವು. 2022 ರಲ್ಲಿ ಒಂದು ಕುರಿಯ ಬೆಲೆ 10 ಸಾವಿರದ ವರೆಗೆ ಇರುತ್ತದೆ. ಒಂದು ವಯಸ್ಕ ಕುರಿಯಿಂದ 20 ರಿಂದ 25 ಕೆ ಜಿ ಮಾಂಸ ಬರುತ್ತದೆ. 2022 ರಲ್ಲಿ ಒಂದು ಕೆ ಜಿ ಕುರಿ ಮಾಂಸಕ್ಕೆ 600 ರೂ ಬೆಲೆ ಇತ್ತು. ಒಂದು ಕುರಿಯ ಜೀವಾವಧಿ 12 ವರ್ಷ ಇರುತ್ತದೆ. ಒಂದು ಕುರಿ 6 ಬಾರಿ ಮರಿಹಾಕುವ ಸಾಧ್ಯತೆ ಇರುತ್ತದೆ. ಗಾಯಗೊಂಡಿರುವ ಕುರಿ ಮತ್ತು ಆಡಿನ ವಯಸ್ಸು 3-4 ವರ್ಷದ ಆಡುಗಳು ಇದ್ದವು. ನಿ ಪಿ 18 ರಿಂದ 28 ರಲ್ಲಿ ಕಾಣಿಸಿದ ಪ್ರಾಣಿಗಳು ರಸ್ತೆ ಅಪಘಾತದಲ್ಲಿ ಗಾಯಗೊಂಡು ಮರಣ ಹೊಂದಿರುತ್ತವೆ. ನಾನು ನೀಡಿರುವ ಗಾಯದ ಪ್ರಮಾಣ ಪತ್ರದ ಪ್ರಕಾರ ಪ್ರಾಣಿಗಳಿಗೆ ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ವಿ ಜಿ ಪಿ ವಕೀಲರಿಂದಃ-**

ಕುರಿಗಳ ವಯಸ್ಸನ್ನು ಬಾಯಿ ನೋಡಿ ನಮೂದು ಮಾಡಿರುತ್ತೇನೆ. ಶಾಶ್ವತ ಹಲ್ಲುಗಳನ್ನು ನೋಡಿ ಅವು ವಯಸ್ಕ ಕುರಿ ಅಂತಾ ತೋರಿಸಿರುತ್ತೇನೆ. ವಯಸ್ಕ ಕುರಿಗೆ 8 ಹಲ್ಲುಗಳು ಇರುತ್ತವೆ. ಗಾಯದ ಪ್ರಮಾಣ ಪತ್ರದಲ್ಲಿ ಹಲ್ಲುಗಳ ಬಗ್ಗೆ ಮತ್ತು ಹಲ್ಲುಗಳ ಗಾತ್ರದ ಬಗ್ಗೆ ನಮೂದು ಮಾಡಿರುವುದಿಲ್ಲಾ ಎಂದರೆ ಸರಿ. ಹೀಗಾಗಿ ಅವುಗಳ ವಯಸ್ಸು ನನಗೆ ಹೇಳಲು ಆಗುವುದಿಲ್ಲಾ ಎಂದರೆ ಸರಿ. ಶವ ಪರೀಕ್ಷೆಯನ್ನು ಎಲ್ಲಿ ಮಾಡಿದ್ದೇನೆ ಅಂತಾ ನಮೂದು ವಾಡಿರುವುದಿಲ್ಲಾ ಎಂದರೆ ಸರಿ. ನಿರ್ದಿಷ್ಟ ಸ್ಥಳ ಹೇಳಲು ಆಗುವುದಿಲ್ಲಾ ಎಂದರೆ ಸರಿ. ಗರ್ಭವಸ್ಥೆಯಲ್ಲಿ ಇದ್ದ ಕುರಿಗಳ ಪರೀಕ್ಷೆ ಮಾಡಿದಿದ್ದರೆ ಅದರ ಹೊಟ್ಟೆಯಲ್ಲಿ ಯಾವ ಮರಿ ಇತ್ತು ಅಂತಾ ನಮೂದು ಮಾಡುತ್ತಿದ್ದೆ ಎಂದರೆ ಸರಿ. ಯಾವುದೇ ಕುರಿಗಳು ಗರ್ಭವಸ್ಥೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕುರಿಗಳು ಗರ್ಭವಸ್ಥೆಯಲ್ಲಿ ಇದಿದ್ದರೆ ಅದನ್ನು ನಾನು ಪಿ ಎಂ ನಲ್ಲಿ ನಮೂದು ಮಾಡುತ್ತಿದ್ದೆ ಎಂದರೆ ಸರಿ. ಗಾಯದ ಪ್ರಮಾಣ ಪತ್ರಗಳಲ್ಲಿ ಇರುವ ನಿಯಮಗಳನ್ನು ನಾನು ಪಾಲನೆ ವಾಡಿಲ್ಲಾ ಎಂದರೆ ಮಾಡಿದ್ದೇನೆ. ನಾನು ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ವಿವರ ಅಳತೆ ಗಾಯ ಎಲ್ಲಿ ಆಗಿದೆ ಮತ್ತು ಯಾವ ರೀತಿಯ ಗಾಯ ಆಗಿದೆ ಅದು ಶಾಶ್ವತ ಗಾಯವೇ ಅದನ್ನು ಗುಣಪಡಿಸಬಹುದೇ ಎಂಬುದರ ವಿವರಗಳನ್ನು ನಮೂದು ಮಾಡಿರುವುದಿಲ್ಲಾ ಎಂದರೆ ಸರಿ. ಕುರಿಗಳಿಗೆ ಆಗಿದ್ದ ಗಾಯಗಳು ಗುಣಪಡಿಸಲಾಗದ ಗಾಯಗಳು ಆಗಿರುತ್ತವೆ. ಸ್ಪಸ್ಪೈನಲ್ ಕಾರ್ಡಗೆ ಆದ ಗಾಯಗಳು ಗುಣಪಡಿಸಲು ಆಗುವುದಿಲ್ಲಾ. ಮೂಳೆ ಮುರಿತಾ ವಾಸಿ ಆಗುತ್ತದೆ. ಪ್ರಾಣಿಗಳಿಗೆ ಮುಂದುವರಿದ ಚಿಕಿತ್ಸೆಗಳು ನೀಡಿದ ಬಗ್ಗೆ ಗಾಯ ಪ್ರಮಾಣ ಪತ್ರದಲ್ಲಿ ನಮೂದು ಆಗಿರುವುದಿಲ್ಲಾ. ಕುರಿಗಳಲ್ಲಿ ಕೆಲವು ಗೊಡ್ಡು ಕುರಿಗಳು ಇರುತ್ತವೆ ಗರ್ಭಧರಿಸುವುದಿಲ್ಲಾ ಎಂದರೆ ಸರಿ. ಗೊಡ್ಡು ಕುರಿಗಳನ್ನು 1-2 ವರ್ಷದಲ್ಲಿ ಮಾರಾಟ ಮಾಡುತ್ತಾರೆ ಎಂದರೆ ಸರಿ. ನಾನು ಶವಪರೀಕ್ಷೆ ಮಾಡಿದ ಪ್ರಾಣಿಗಳ ತೂಕ ಮಾಡಿರುವುದಿಲ್ಲಾ.

ಅಂದಾಜಿನ ಮೇಲೆ ತೂಕ ಹೇಳಿರುತ್ತೇನೆ. ಕುರಿಗಳ ತೂಕವನ್ನು ಗಾಯದ ಪ್ರಮಾಣ ಪತ್ರದಲ್ಲಿ ಮತ್ತು ಶವಪರೀಕ್ಷಾ ವರದಿಯಲ್ಲಿ ನಮೂದು ಮಾಡಿರುವುದಿಲ್ಲಾ. ಗಾಯದ ಪ್ರಮಾಣ ಪತ್ರದಲ್ಲಿ ಮತ್ತು ಶವಪರೀಕ್ಷಾ ವರದಿಯಲ್ಲಿ ಅಪಘಾತ ದಿಂದಲೇ ಗಾಯ ವತ್ತು ಮರಣ ಸಂಭವಿಸಿದೆ ಅಂತಾ ನಮೂದು ಮಾಡಿರುವುದಿಲ್ಲಾ ಎಂರದೆ ಗಟ್ಟಿ ವಸ್ತುವಿಗೆ ತಾಗಿ ಗಾಯ ಆಗಿದೆ ಅಂತಾ ನಮೂದು ಮಾಡಿರುತ್ತೇನೆ. ನಾನು ಯಾವುದೇ ಶವ ಪರೀಕ್ಷಾ ಜರೂಗಿಸಿಲ್ಲಾ, ಪ್ರಾಣಿಗಳಿಗೆ ಯಾವುದೇ ಚಿಕಿತ್ಸೆ ಕೊಟ್ಟಿಲ್ಲಾ, ಕಚೇರಿಯಲ್ಲಿಯೇ ಶವ ಪರೀಕ್ಷಾ ವರದಿ ವತ್ತು ಗಾಯದ ಪ್ರಮಾಣ ಪತ್ರಗಳನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಕುರಿಗಳ ಬೆಲೆ 10 ಸಾವಿರ ರೂ ಇರುವುದಿಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರ ಮತ್ತು ಪೋಲೀಸ ಇಲಾಖೆಯೆಜಾಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.